ಆ) ಪ್ರತಿ ಪಾಲಿಟೆಕ್ನಿಕ್‌ನ ಪ್ರವೇಶ ಸಂಖ್ಯೆಯ ಜನರಲ್ ಮೆರಿಟ್ ಸ್ಥಾನಗಳ ಪೈಕಿ, ಶೇ. 25 ರಷ್ಟು ಪ್ರವೇಶಗಳನ್ನು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಮಾಸಲಾಗಿಟ್ಟಿರುತ್ತದೆ. ಉಳಿದ ಶೇ. 75ರಷ್ಟು ಸ್ಥಾನಗಳು ಇತರರಿಗೆ ಕೊಡಲಾಗುತ್ತಿದೆ. ಆದ್ದರಿಂದ ಈಗ ಜಾರಿಯಲ್ಲಿರುವ ಪದ್ಧತಿಗೆ ತಿದ್ದುಪಡಿಯ ಅಗತ್ಯವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕ.ರಾ.ರ.ಸಾ. ಸಂಸ್ಥೆಯು ಖರೀದಿಸಿದ ಯಂತ್ರೋಪಕರಣಗಳ ಒಟ್ಟು ಮೌಲ್ಯದ ಬಗ್ಗೆ

1771. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕ.ರಾ.ರ.ಸಾ. ಸಂಸ್ಥೆಯು 1991 ಜನವರಿಯಿಂದ ಡಿಸೆಂಬರ್‌ವರೆಗೂ ಬಿಡಿಭಾಗಗಳು ಹಾಸಿ, ಟೈರು ಟ್ಯೂಬುಗಳನ್ನು ಖರೀದಿಸಿದ ಒಟ್ಟು ಮೌಲ್ಯವೆಷ್ಟು ;

ಆ) ಖರೀದಿ ಮಾಡಲು ಕೊಟೇಷನ್ ಕರೆಯಲಾಗಿದೆಯೇ ;

ಇ) ಈ ಖರೀದಿಯನ್ನು ಖರೀದಿ ಮತ್ತು ಉಗ್ರಾಣ ಇಲಾಖೆ, ಕೆಎಸ್‌ಜಿಎಂಸಿ, ಡಿಜಿಎಸ್‌ಡಿ. ಯಲ್ಲಿ ಅಧಿಕೃತವಾಗಿ ನಮೂದಿಸಿದ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆಯೇ ?

ಶ್ರೀ ಆಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಕ.ರಾ.ರ.ಸಾ. ಸಂಸ್ಥೆಯು 1991ರಲ್ಲಿ ಬಿಡಿಭಾಗಗಳು, ಚಾಸಿಗಳು, ಟೈರು, ಟ್ಯೂಬುಗಳ ಒಟ್ಟು ಮೌಲ್ಯ ಕೆಳಗಿನಂತಿದೆ.

	ಕೋಟಿ ರೂ.ಗಳಲ್ಲಿ
ಬಿಡಿ ಭಾಗಗಳು	15.70
ಚಾಸಿಗಳು	36.26
ಟೈರು ಮತ್ತು ಟ್ಯೂಬುಗಳು	24.00

ಆ) ಕ.ರಾ.ರ.ಸಾ. ಸಂಸ್ಥೆಯು ಮೂರು ವಿಧಾನದ ಖರೀದಿಯನ್ನು ಅನುಸರಿಸುತ್ತವೆ. ಅವುಗಳೆಂದರೆ ಏಕಸ್ವಾಮ್ಯ ಒಡೆತನ, (ರೇಟ್ ಕಂಟ್ರಾಕ್ಟ್) ದರ ಸಂವಿದ ಹಾಗು ಟೆಂಡರ್‌ನಂತೆ ಖರೀದಿ.

ಏಕಸ್ವಾಮ್ಯ ಒಡೆತನದ ಬಿಡಿಭಾಗಗಳನ್ನು ಅದರ ತಯಾರಕರಾದ ಮೈಕೋ, ಟೆಲ್ಕೋ, ಲೇಲ್ಯಾಂಡ್, ಲ್ಯೂಕಾಸ್, ಟಿವಿಎಸ್. ಇವರಿಂದ ಬೆಲೆ ಪಟ್ಟಿ ಆಧಾರದ ಮೇಲೆ ಖರೀದಿಸಲಾಗುವುದು.

ದರ ಸಂವಿದ ಬಿಡಿಭಾಗಗಳನ್ನು ಎ.ಎಸ್.ಆರ್.ಟಿ. ಯು (ದೆಹಲಿ ಭೂಸಾರಿಗೆ ಅಧೀನಕ್ಕೊಳಪಟ್ಟ ನಿಗಮ) ನಿರ್ಧರಿಸಿದ ದರ ಸಂವಿದಯಂತೆ ತುಲನೆ ಮಾಡಿ ಗುಣಮಟ್ಟದ ಆಧಾರದ ಮೇಲೆ ಖರೀದಿಸಲಾಗುವುದು.

ಟೈರು ಮತ್ತು ಟ್ಯೂಬುಗಳನ್ನು ಅದರ ತಯಾರಕರಿಂದ ಮೂರು ತಿಂಗಳಿಗೊಮ್ಮೆ ಟೆಂಡರ್ ಕರೆದು ತೀರ್ಮಾನಿಸಲಾಗುವುದು. ಇನ್ನಿತರ ಬಿಡಿಭಾಗಗಳನ್ನು ಕ.ರಾ.ರ.ಸಾ. ಸಂಸ್ಥೆ ಮಾರಕ ಉದ್ಯಮಗಳಿಂದಲೂ ನಮ್ಮಲ್ಲಿ ದಾಖಲು ಮಾಡಿದ ಸಣ್ಣ ಪ್ರಮಾಣದ ಕೈಗಾರಿಕೆಗಳಿಂದಲೂ ಮತ್ತು ರಾಜ್ಯದಲ್ಲಿನ ಕೈಗಾರಿಕೆ ಸಂಸ್ಥೆ. ದರ ಸಂವಿದ ಸಂಸ್ಥೆಗಳು ಜೊತೆ ತುಲನೆ ಮಾಡಿ ಖರೀದಿಸಲಾಗುವುದು. ಇನ್ನಿತರ ಟೆಂಡರ್ ಬಿಡಿಭಾಗಗಳಿಗೆ ಕೋಟೇಷನ್ ಕರೆದು ಖರೀದಿಯನ್ನು ನಿರ್ಧರಿಸಲಾಗುವುದು.

ಇ) ಕ.ರಾ.ರ.ಸಾ. ಸಂಸ್ಥೆಯು ಇನ್ನಿತರ ಸಂಸ್ಥೆಗಳಾದ ಕೆ.ಎಸ್.ಐ.ಎಂ.ಸಿ., ಖರೀದಿ ಮತ್ತು ಉಗ್ರಾಣ ಇಲಾಖೆ, ಡಿ.ಜಿ.ಎಸ್.ಡಿ. ಯಲ್ಲಿ ಅಧಿಕೃತವಾಗಿ ದಾಖಲು ಮಾಡಿದ ಸಂಸ್ಥೆಗಳಿಂದಲೂ ಅವುಗಳು ಟೆಂಡರ್ ಕರೆದಾಗ ಭಾಗವಹಿಸಿದಲ್ಲಿ ಪರಿಗಣಿಸುವುದು.

ಬೆಂಗಳೂರು ನಗರ ಸಾರಿಗೆಯಲ್ಲಿ ಕಾರ್ಯಾಚರಣೆಯಲ್ಲಿರುವ ಡಬಲ್‌ಡೆಕರ್ ವಾಹನಗಳ ಬಗ್ಗೆ

1772. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಸಾರಿಗೆಯಲ್ಲಿ ಕಾರ್ಯಾಚರಣೆಯಲ್ಲಿರುವ ಡಬಲ್ ಡೆಕರ್ ವಾಹನಗಳ ಸಂಖ್ಯೆ ;

ಆ) 1991ನೇ ಸಾಲಿನಲ್ಲಿ ಖರೀದಿಸಿದ ಡಬಲ್ ಡೆಕರ್‌ಗಳ ಸಂಖ್ಯೆ :

ಇ) ಡಬಲ್‌ಡೆಕರ್ ವಾಹನಗಳು ಹಳೆಯದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಬದಲಾವಣೆಗೆ ತೆಗೆದುಕೊಂಡ ಕ್ರಮ ;

ಉ) 1992ನೇ ಸಾಲಿನಲ್ಲಿ ಎಷ್ಟು ಡಬಲ್ ಡೆಕರ್ ವಾಹನಗಳನ್ನು ಸೇರ್ಪಡಿಸುವ ಪ್ರಸ್ತಾವನೆ ಇದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) 22 ಅನುಸೂಚಿಗಳಿಗೆ 27 ವಾಹನಗಳಿವೆ.

ಆ) 1991ನೇ ಸಾಲಿನಲ್ಲಿ ಡಬಲ್ ಡೆಕರ್‌ಗಳನ್ನು ಖರೀದಿಸಿರುವುದಿಲ್ಲ.

ಇ) ಹೌದು, ಕೆಲವು ವಾಹನಗಳು ಹಳೆಯದಾಗಿರುತ್ತವೆ.

ಈ) ವಾಹನಗಳನ್ನು ಹಂತಹಂತವಾಗಿ ತೆಗೆದು, ರದ್ದುಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

ಉ) 1992ನೇ ಸಾಲಿನಲ್ಲಿ ಡಬಲ್‌ಡೆಕರ್ ವಾಹನಗಳನ್ನು ಖರೀದಿಸುವ ಪ್ರಸ್ತಾವನೆ ಇಲ್ಲ.